ದಿನಾಂಕ **27-02-2023** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.

| | | |
|---|---|---|
| ಹೆಸರು | : | ದಾಮಾಜಿ |
| ತಂದೆಯ ಹೆಸರು | : | ಪಾಂಡುರಂಗ ಜಾಧವ |
| ವಯಸ್ಸು | : | 70 ವರ್ಷ ಗಳು, |
| ಉದ್ಯೋಗ | : | ಒಕ್ಕಲುತನ & ಪಿಂಚಣಿದಾರ |
| ವಾಸ ಸ್ಥಳ | : | ಘಾಟ ಬೋರಳ (ಎಸ್) ತಾಂಡಾ. |

ವಾದಿ ಪರ ವಕೀಲರಾದ **Sri. R.V.M** ರವರಿಂದ ಸಾಕ್ಷಿಯ ಮುಖ್ಯವಿಚಾರಣೆ

ನಾನು ಈ ದಿವಸ ನನ್ನ ಮೌಖಿಕ ಸಾಕ್ಷಿಯನ್ನು ಶಪಥ ಪತ್ರದ ರೂಪದಲ್ಲಿ ಈಗ ನ್ಯಾಯಾಲಯದಲ್ಲಿ ಸಲ್ಲಿಸುತ್ತಿದ್ದೇನೆ. ಸದರಿ ಶಪಥ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ ಆ ಕಾರಣ ಅವುಗಳಲ್ಲಿಯ ಅಂಶಗಳು ನಿಜವಿರುತ್ತದೆ. ಸದರಿ ಅಂಶಗಳನ್ನು ಓದಿಸಿ ತಿಳಿದುಕೊಂಡ ಮೇಲೆ ಒಪ್ಪಿ ನನ್ನ ಸಹಿ ಮಾಡಿರುತ್ತೇನೆ.

1. ದಿನಾಂಕ 28-5-1987 ರಂದು ಆಗಿರುವ ಕ್ರಯಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.
2. ದಿನಾಂಕ 26-7-2000 ಲರಂದು ಆಗಿರುವ ಭಾಗ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರೀ ದಾಖಲೆಯ ಭಾಷಾಂತರಿಸಿದ ಪ್ರತಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸದರೀ ದಾಖಲೆಗೆ ಇರುವ ಸಾಕ್ಷಿ ಮತ್ತು ಅವರ ಸಹೋದರರ ಸಹಿ ಹಾಗೂ ಸಾಕ್ಷಿದಾರರ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿಪಿ-2(ಎ) ಯಿಂದ ನಿಪಿ-2(ಹೆಚ್) ಎಂದು ಗುರುತಿಸಲಾಯಿತು. ಸದರೀ ಭಾಗ ಪತ್ರಕ್ಕೆ ಸಾಕ್ಷಿಯಾಗಿ ಕಮಲಾಕರ ಅವರು ಈಗ ಮರಣ ಹೊಂದಿರುತ್ತಾರೆ. ಅದೇ ರೀತಿ ಭಾಗ ಪತ್ರವನ್ನು ಬರೆದಂತೆ ವಾಲ್ಮಿಕ ಜಾಧವ ಅವರು ಸಹ ಈಗ ಮರಣ ಹೊಂದಿರುತ್ತಾರೆ.

**3.** ಇನ್ನೊಂದು ಭಾಗ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರೀ ದಾಖಲೆಗೆ ಇರುವ ಸಾಕ್ಷಿ ಮತ್ತು ಅವರ ಸಹೋದರರ ಸಹಿ ಹಾಗೂ ಸಾಕ್ಷಿದಾರರ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿಪಿ-3(ಎ) ಯಿಂದ ನಿಪಿ-2(ಹೆಚ್) ಎಂದು ಗುರುತಿಸಲಾಯಿತು. ಸದರೀ ಭಾಗ ಪತ್ರಕ್ಕೆ ಸಾಕ್ಷಿಯಾಗಿ ಕಮಲಾಕರ ಅವರು ಈಗ ಮರಣ ಹೊಂದಿರುತ್ತಾರೆ.

**4.** Sy.No. 48/5 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಕೋರಿಕೆಯ ಮೇರೆಗೆ ಮುಂದುಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**(ಓ.ಹೇ.ಕೇ.ಸ.ಇದೆ)**

ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಬಸವಕಲ್ಯಾಣ

ಸಾಕ್ಷಿದಾರರ ಸಹಿಃ